ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಪ್ರದನ್ಯಾದಂ.,ರವರ ನ್ಯಾಯಾಲಯ, ಕಡೂರು
<u>ಸಿ.ಸಿ.ನಂ.**1031/2022.**</u>

ದಿನಾಂಕಃ**29.01.2026** ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು

| | | |
|---|---|---|
| ಸಾಕ್ಷಿಯ ಹೆಸರು | ರಘುರಾಮ್ | ಚಾಸಾ-4, ಪ್ರಾಸಾ-3 |
| ತಂದೆಯ ಹೆಸರು | ಗೋವಿಂದಪ್ಪ | |
| ವಯಸ್ಸು (ವರ್ಷಗಳಲ್ಲಿ) | 38 | |
| ಉದ್ಯೋಗ | ವ್ಯವಸಾಯ | |
| ವಾಸ | ಅರುವನಹಳ್ಳಿ ಗ್ರಾಮ | |

<u>ಮುಖ್ಯ ವಿಚಾರಣೆಃ ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರಿಂದಃ</u>

ಚಾಸಾ 2, 3 ಗೊತ್ತು. ಚಾಸಾ 1, 5 ರಿಂದ 7 ಗೊತ್ತಿಲ್ಲ. ಮೃತ ರೇವಣ್ಣ ಗೊತ್ತು. ಈ ಪ್ರಕರಣದ ಬಗ್ಗೆ ನನಗೆ ಯಾವುದೇ ಮಾಹಿತಿ ಇರುವುದಿಲ್ಲ. ನಾನು ಯಾವುದೇ ಅಪಘಾತವನ್ನು ಕಣ್ಣಾರೆ ನೋಡಿಲ್ಲ. ಪೊಲೀಸರಿಗೆ ನಾನು ಹೇಳಿಕೆ ನೀಡಿರುವುದಿಲ್ಲ. ಪೊಲೀಸರ ಕೋರಿಕೆಯ ಮೇರೆಗೆ 2 ದಾಖಲೆಗೆ ಸಹಿ ಹಾಕಿರುತ್ತೇನೆ. ಈಗ ನೋಡುತ್ತಿರುವ ದಾಖೆಗಳಲ್ಲಿ ನನ್ನ ಸಹಿ ಇದೆ, ಸದರಿ ದಾಖಲೆಗಳು ಸ್ಥಳ ಮಹಜರ್ ಮತ್ತು ಅಮಾನತ್ತು ಮಹಜರ್ ಆಗಿದ್ದು ಅವುಗಳನ್ನು ಕ್ರಮವಾಗಿ ಈಗಾಗಲೇ ನಿಪಿ 3, 5 ಎಂದು ಗುರುತಿಸಿದ್ದು, ಸಾಕ್ಷಿಯ ಸಹಿಗಳನ್ನು ನಿಪಿ3 ಬಿ, 5 ಬಿ ಎಂದು ಗುರುತಿಸಲಾಯಿತು. ನಿಪಿ3 ರಿಂದ 5 ರಲ್ಲಿ ಬರೆದಿರುವ ವಿಚಾರಗಳು ನನಗೆ ಗೊತ್ತಿಲ್ಲ. ಪೊಲೀಸರು ನನ್ನ ಸಮಕ್ಷಮ ಯಾವುದೇ ಮಹಜರ್ ಮಾಡಿರುವುದಿಲ್ಲ ಮತ್ತು ಯಾವುದೇ ವಾಹನ ಅಮಾನತ್ತು ಪಡಿಸಿಕೊಂಡಿರುವುದಿಲ್ಲ. ನಾನು ಅಪಘಾತದ ಸ್ಥಳವನ್ನು ಪೊಲೀಸರಿಗೆ ತೋರಿಸಿರುವುದಿಲ್ಲ ಹಾಗೂ ಯಾವುದೇ ಹೇಳಿಕೆ ನೀಡಿರುವುದಿಲ್ಲ. ಸಾಕ್ಷಿಯು ಈಗ ನೋಡುತ್ತಿರುವ ನಿಪಿ 4 ಪೋಟೋದಲ್ಲಿ ತನ್ನ ಇರುವಿಕೆಯನ್ನು ನೋಡಿ ಗುರುತಿಸಿದರು. ನಿಪಿ 4 ನ್ನು ಯಾವಾಗ ಮತ್ತು ಯಾವ ಉದ್ದೇಶಕ್ಕಾಗಿ ತೆಗೆದಿರುತ್ತಾರೆ ಎಂದು ನನಗೆ ಗೊತ್ತಿಲ್ಲ.

(ಈ ಹಂತದಲ್ಲಿ ಸಾಕ್ಷಿಯು ಅಭಿಯೊಜನೆಯ ಪ್ರಕರಣಕ್ಕೆ ಪ್ರತಿಕೂಲವಾಗಿ ಸಾಕ್ಷ್ಯ ನುಡಿದಿರುವುದರಿಂದ ಸಹಾಯಕ ಸರ್ಕಾರಿ ಅಭಿಯೋಜಕರು ಸಾಕ್ಷಿದಾರರನ್ನು ಪ್ರತಿಕೂಲ ಸಾಕ್ಷಿಯನ್ನಾಗಿ ಪರಿಗಣಿಸಿ, ಪಾಟೀ ಸವಾಲನ್ನು ಮಾಡಲು ಮಾನ್ಯ ಸ ಸ ಅ ರವರು

ಅನುಮತಿಯನ್ನು ಕೋರಿದ್ದು ಅನುಮತಿ ನೀಡಲಾಯಿತು)

ಪಾಟೀಸವಾಲುಃ ಮಾನ್ಯ ಸ ಸ ಅ ರವರಿಂದ ಃ

ದಿಃ20.09.2021 ರಂದು ನಾನು ಊರಿನಿಂದ ಕಡೂರಿಗೆ ಬಂದಿದ್ದು, ಮಧ್ಯಾಹ್ನ ಸು.2.30 ಕ್ಕೆ ಕಡೂರಿನಿಂದ ನನ್ನ ಬೈಕಿನಲ್ಲಿ ವಾಪಾಸು ನಮ್ಮ ಊರಾದ ಅರುವನಹಳ್ಳಿಗೆ ಎನ್ ಹೆಚ್ 206 ರಸ್ತೆಯಲ್ಲಿ ಹೋಗುತ್ತಿದ್ದೆ ಎಂದರೆ ಸರಿಯಲ್ಲ. ನಂತರ ನನ್ನ ಮುಂದೆ ಒಬ್ಬ ಟಿ ವಿ ಎಸ್ ಎಕ್ಸ್‌ಎಲ್ ನಲ್ಲಿ ಕಡೂರಿನಿಂದ ಬಾಣಾವಾರದ ಕಡೆಗೆ ಹೋಗುತ್ತಿದ್ದರು ಎಂದರೆ ಸರಿಯಲ್ಲ. ಅದೇ ಸಮಯಕ್ಕೆ ನನ್ನ ಹಿಂದಿನಿಂದ ಒಂದು ಕೆ ಎಸ್ ಆರ್ ಟಿ ಸಿ ಬಸ್ಸನ್ನು ಅದರ ಚಾಲಕ ಅತೀ ವೇಗವಾಗಿ ಚಾಲನೆ ಮಾಡಿಕೊಂಡು ಬಂದು ನನ್ನ ಬೈಕ್ ಓವರ್ ಟೇಕ್ ಮಾಡಿ ಮುಂದೆ ಹೋಗಿ ಅರುವನಹಳ್ಳಿ ಗೇಟ್ ಬಳಿ ನನ್ನ ಮುಂದೆ ಹೋಗುತ್ತಿದ್ದ ಟಿ ವಿ ಎಸ್ ಎಕ್ಸ್‌ಎಲ್ ಗೆ ಹಿಂದಿನಿಂದ ಡಿಕ್ಕಿಪಡಿಸಿದರು ಎಂದರೆ ಸರಿಯಲ್ಲ. ಆ ನಂತರ ಟಿ ವಿ ಎಸ್ ಎಕ್ಸ್‌ಎಲ್ ಚಾಲಕ ರಸ್ತೆ ಮೇಲೆ ಬಿದ್ದಿದ್ದು, ನಾನು ಹೋಗಿ ನೋಡಿದಾಗ ಗಾಯಾಳುವಿನ ಹೆಸರು ರೇವಣ್ಣ, ಹಿರೇಗರ್ಜೆ ವಾಸಿ ಎಂದು ತಿಳಿಯಿತು ಎಂದರೆ ಸರಿಯಲ್ಲ. ಸದರಿಯವರಿಗೆ ತಲೆಗೆ ಮೈಕೈಗೆ ತೀವ್ರ ಗಾಯವಾಗಿತ್ತು ಎಂದರೆ ನನಗೆ ಗೊತ್ತಿಲ್ಲ. ಅಪಘಾತ ಪಡಿಸಿದ ಬಸ್ಸು ಸಂ.ಕೆಎ 35 ಎಫ್ 416 ಆಗಿತ್ತು ಎಂದರೆ ಸರಿಯಲ್ಲ. ನಂತರ ಸದರಿ ಬಸ್ಸಿನ ಚಾಲಕ ಮತ್ತು ಕಂಡಕ್ಟರ್ ಅಲ್ಲಿಗೆ ಬಂದಿದ್ದು, ಸದರಿ ಬಸ್ಸಿನ ಚಾಲಕನ ಹೆಸರು ವಿಚಾರಿಸಿದಾಗ ಮಹಾಂತಪ್ಪ ಮತ್ತು ಕಂಡಕ್ಟರ್ ಹೆಸರು ವಿಷ್ಣು ಎಂದು ತಿಳಿಸಿದರು ಎಂದರೆ ಸರಿಯಲ್ಲ. ನಂತರ, ಅಪಘಾತಕ್ಕೆ ಒಳಪಟ್ಟ ಟಿ ವಿ ಎಸ್ ಎಕ್ಸ್ ಎಲ್ ಸಂಖ್ಯೆ ನೋಡಿದಾಗ ಕೆಎ 66 ಹೆಚ್ 8311 ಆಗಿತ್ತು ಎಂದರೆ ಸರಿಯಲ್ಲ. ನಂತರ ನಾನು ರೇವಣ್ಣರವರಿಗೆ ಉಪಚರಿಸಿ ಬರುತ್ತಿದ್ದ ಯಾವುದೋ ವಾಹನದಲ್ಲಿ ಕಡೂರಿನ ಆಸ್ಪತ್ರೆಗೆ ಕಳುಹಿಸಿಕೊಟ್ಟೆ ಎಂದರೆ ಸರಿಯಲ್ಲ. ನಂತರ, ರೇವಣ್ಣ ರವರನ್ನು ಹೆಚ್ಚಿನ ಚಿಕಿತ್ಸೆಗೆ ಶಿವಮೊಗ್ಗದ ಆಸ್ಪತ್ರೆಗೆ ಕರೆದುಕೊಂಡುಹೋಗುತ್ತಿದ್ದಾಗ ಮಾರ್ಗ ಮದ್ಯದಲ್ಲಿ ಮೃತಪಟ್ಟಿರುವ ವಿಚಾರ ನನಗೆ ತಿಳಿಯಿತು ಎಂದರೆ ಸರಿಯಲ್ಲ.

ಆ ನಂತರ, ದಿಃ21.09.2021 ರಂದು ಪೊಲೀಸರು ಅಪಘಾತದ ವಿಚಾರವಾಗಿ ಮಹಜರಿಗೆ ಬಂದಿದ್ದು ನಾನು ತೋರಿಸಿದ ಸ್ಥಳದಲ್ಲಿ ಚಾಸಾ 2 ಮತ್ತು ಚಾಸಾ 3 ರವರ

ಸಮಕ್ಷಮ ಮಧ್ಯಾಹ್ನ 2.30 ರಿಂದ 3.30 ರ ತನಕ ನಿಪಿ 3 ಪಂಚನಾಮೆ ಮಾಡಿ ನಿಪಿ 4 ರಂತೆ ಪೋಟೋ ತೆಗೆದರು ಎಂದರೆ ಸರಿಯಲ್ಲ. ನಂತರ ಅದೇ ದಿನ ನಾವು ಪೊಲೀಸ್ ಠಾಣೆಗೆ ಹೋಗಿದ್ದು ಠಾಣಾ ಆವರಣದಲ್ಲಿ ನಾನು ತೋರಿಸಿದ ಮೇಲೆ ಹೇಳಿದ ಬಸ್ಸು ಮತ್ತು ಟಿ ವಿ ಎಸ್ ಎಕ್ಸ್‌ಎಲ್ ಅನ್ನು ನಿಪಿ 5 ರಂತೆ ಅಮಾನತ್ತು ಮಹಜರ್ ಮಾಡಿ ಮಧ್ಯಾಹ್ನ 3.45 ರಿಂದ 4.15 ರ ತನಕ ಅಮಾನತ್ತು ಪಡಿಸಿಕೊಂಡಿರುತ್ತಾರೆ ಎಂದರೆ ಸರಿಯಲ್ಲ.

ಈಗ ಓದಿ ಹೇಳಿದಂತೆ ದಿನಾಂಕ 21.09.2021

ರಂದು ನಾನು ಪೊಲೀಸರಿಗೆ ಹೇಳಿಕೆ ನೀಡಿರುತ್ತೇನೆ ಎಂದರೆ ಸರಿಯಲ್ಲ. ಸಾಕ್ಷಿಯು ಹೇಳಿಕೆಯನ್ನು ಅಲ್ಲಗಳೆದ ಕಾರಣ ಸದರಿ ಹೇಳಿಕೆಯನ್ನು ನಿಪಿ 6 ಎಂದು ಗುರುತಿಸಲಾಯಿತು. ಈ ಎಲ್ಲಾ ವಿಚಾರಗಳು ಗೊತ್ತಿದ್ದರು ಸಹಃ ಆರೋಪಿಗೆ ಸಹಾಯ ಮಾಡಲು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಪಾಟೀಸವಾಲುಃ ಆರೋಪಿ ಪರ ಶ್ರೀ. ಎನ್ ಎಸ್ ವಕೀಲರಿಂದಃ ಇರುವುದಿಲ್ಲ.

ಮರು ವಿಚಾರಣೆ ಃ ಇಲ್ಲ

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿದನ್ನು ಬೆರಳಚ್ಚುಗಾರರಿಗೆ ಉಕ್ತಲೇಖನ ನೀಡಿ ಬೆರಳಚ್ಚು ಮಾಡಿಸಲಾಯಿತು)

ಓ ಹೇ ಕೇ ಸ ಇ ಒ,

sd/-
ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು
ಪ್ರಃದಃನ್ಯಾಃದಂ.,ರವರು, ಕಡೂರು.